ತಾಲ್ಲೂಕು ನುಲೇನೂರು ಗ್ರಾಮದ ಸರ್ವೆ ನಂ. 27 ರಲ್ಲಿ ಈ ಹಿಂದೆ ಗೋಡಂಬಿ ಗಿಡ ಬೆಳೆಸಲು ದರ್ಖಾಸ್ತು ಮೂಲಕ ಮಂಜೂರಾಗಿದ್ದು ನಿಬಂಧನೆಯನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಮಂಜೂರಾತಿಯನ್ನು ಸರ್ಕಾರ ವಜಾ ಮಾಡಿದ್ದು ಮತ್ತು ಸರ್ಕಾರದ ಆದೇಶವನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು ಅದು ಅಂತಿಮವಾಗಿ ತೀರ್ಮಾನವಾಗಿರುವುದು ತಿಳಿದುಬಂದಿರುತ್ತದೆ. ಆದರೆ ಅದೇ ಜಮೀನಿನಲ್ಲಿ ಬಡಜನರು ಅನೇಕ ವರ್ಷಗಳಿಂದ ಸಾಗುವಳಿ ಮಾಡುತ್ತಿದ್ದು ಜಮೀನು ಮಂಜೂರಾತಿಗಾಗಿ ಅರ್ಜಿದಾರರು ಒತ್ತಾಯಿಸುತ್ತಿದ್ದಾರೆ. ಈಗ ಆ ಜಮೀನಿನ ಪರಿಸ್ಥಿತಿ ಏನು? ಬಡ ಜನರಿಗೆ ಅದನ್ನು ಮಂಜೂರಾತಿ ಮಾಡಬಹುದೇ? ಅದರ ಕಡತ ಯಾವ ಕಛೇರಿಯಲ್ಲಿ ಅಡಕವಾಗಿದೆ ಎಂಬುದನ್ನು ತಿಳಿಸುವಂತೆ ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಸಚಿವರು), ಕಂದಾಯ ಮಂತ್ರಿಗಳ ಪರವಾಗಿ : ಮಾನ್ಯ ಅಧ್ಯಕ್ಷರೆ, 1964 ನೇ ಇಸವಿಯಲ್ಲಿ, ತುಮಕೂರು ಜಿಲ್ಲೆ, ಚಿಕ್ಕನಾಯಕನ ಹಳ್ಳಿ ತಾಲೂಕು ಹುಲಿಯೂರು ಹೋಬಳಿ ನುಲೇನೂರು ಗ್ರಾಮದ ಸ.ನಂ. 27 ರಲ್ಲಿ 6 ಜನರಿಗೆ ಸರ್ಕಾರ ಜಮೀನು ಮಂಜೂರು ಮಾಡಿರುತ್ತೆ. 1966 ನೇ ಇಸವಿಯಲ್ಲಿ, ಇದೇ ಸ.ನಂ. ನಲ್ಲಿ ಸರ್ಕಾರವು ಇನ್ನಿಬ್ಬರಿಗೆ ಜಮೀನು ಮಂಜೂರೂ ಮಾಡಿರುತ್ತೆ. ಆದುದರಿಂದ ಸ.ನಂ. 27 ರಲ್ಲಿ ಒಟ್ಟು 8 ಜನರಿಗೆ ಗೋಡಂಬಿ ಸಾಗುವಳಿಗೆ ಜಮೀನು ಮಂಜೂರು ಮಾಡಿ, ಸದರಿ ಜಮೀನನ್ನು 5 ವರ್ಷಗಳ ಒಳಗೆ ಗೋಡಂಬಿ ಸಾಗುವಳಿಗೆ ತರಬೇಕೆಂದು ಷರತ್ತು ವಿಧಿಸಿರುತ್ತೆ. ಆದಾಗ್ಯೂ, ಮಂಜೂರಿದಾರರು ಸದರಿ ಜಮೀನನ್ನು ಗೋಡಂಬಿ, ಸಾಗುವಳಿಗೆ ತರಲಿಲ್ಲವಾದ್ದರಿಂದ, ದಿನಾಂಕ 21-9-78 ರಂದು ಸರ್ಕಾರ ಎಲ್ಲಾ 8 ಜನರಿಗೆ ಮಾಡಿದ್ದ ಜಮೀನಿನ ಮಂಜೂರಾತಿ ರದ್ದು ಮಾಡಿರುತ್ತೆ.

ಮೇಲ್ಕಂಡ 8 ಜನರ ಪೈಕಿ ಮೂವರು ಸರ್ಕಾರದ ಸದರಿ ಜಮೀನಿನ ಮಂಜೂರಾತಿ ರದ್ದತಿ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅಲಾಯಿದ ರಿಟ್ ಪಿಟಿಷನ್‌ಗಳನ್ನು ಸಲ್ಲಿಸಿದ್ದರು. ಈ ಎಲ್ಲಾ ಮೂರು ರಿಟ್ ಪಿಟಿಷನ್‌ಗಳಲ್ಲಿ ಉಚ್ಚನ್ಯಾಯಾಲಯವು ಆದೇಶ ಮಾಡಿ ಸದರಿ ಸರ್ಕಾರಿ ಆದೇಶವನ್ನು ಅನೂರ್ಜಿತಗೊಳಿಸಿ, ಹಿಂದಿನ ಸ್ಥಿತಿಯಂತೆ ನಡುವಳಿಗಳನ್ನು ನಡೆಸಿ, ಕಾನೂನು ರೀತ್ಯಾ ಸದರಿ ವಿಷಯವನ್ನು ವಿಲ್ ಮಾಡಬೇಕೆಂದು ನಿರ್ದೇಶನ ನೀಡಿರುತ್ತೆ.

ಉಚ್ಚ ನ್ಯಾಯಾಲಯದ ಆದೇಶದಂತೆ, ಸರ್ಕಾರವು ಈ ಪ್ರಕರಣವನ್ನು ಹಿಂದಿನ ನಡವಳಿಗಳ ಸ್ಥಿತಿಗೆ ತಂದು ಸದರಿ ವಿಷಯವನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಲಾಗುತ್ತಿದೆ. ಈ ವಿಷಯದಲ್ಲಿ ಸೂಕ್ತ ಆದೇಶವನ್ನು ಇನ್ನು ಸ್ವಲ್ಪ ಕಾಲದಲ್ಲಿ ಹೊರಡಿಸಲಾಗುವುದು.

12.45 ಪಿ.ಎಂ.

6. ಮೇಲುಕೋಟೆಯನ್ನು ಪ್ರವಾಸಿ ಕೇಂದ್ರವಾಗಿ ಅಭಿವೃದ್ಧಿ.

ಶ್ರೀ ಜಿ. ಪುಟ್ಟ ಸ್ವಾಮಿ ಗೌಡ (ಹೊಳೀನರಸೀಪುರ) : ಮಾನ್ಯ ಸಭಾಧಕ್ಷರೆ, ರಾಜ್ಯದ ಪ್ರವಾಸೋದ್ಯಮ ಇಲಾಖೆಯು ಮೇಲುಕೋಟೆಯನ್ನು ಪ್ರವಾಸಿ ಕೇಂದ್ರವೆಂದು ಗುರುತಿಸಿದ್ದು, ಅದರ ಅಭಿವೃದ್ಧಿಗಾಗಿ ಈವರೆಗೆ ಯಾವುದೇ ಹಣವನ್ನು ಖರ್ಚುಮಾಡಿರುವುದಿಲ್ಲ. ಇಲ್ಲಿ ಯಾತ್ರಾರ್ಥಿಗಳ ಅನುಕೂಲಕ್ಕಾಗಿ ಯಾವುದೇ ಒಳ್ಳೆಯ ಹೋಟೆಲ್ ಮತ್ತು ಇತರ ಸೌಲಭ್ಯಗಳು ಇರುವುದಿಲ್ಲ. ಬೆಂಗಳೂರಿನಿಂದ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ವ್ಯವಸ್ಥಿತ ಪ್ರವಾಸವನ್ನೂ ಸಹ ಏರ್ಪಡಿಸಿರುವುದಿಲ್ಲ. ಮೇಲುಕೋಟೆಯನ್ನು ಪ್ರವಾಸಿ ಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರ ಪ್ರವಾಸೋದ್ಯಮ ಇಲಾಖೆಯಿಂದ ಹಣದ ನೆರವನ್ನು ಪಡೆಯಲು ಸಾಧ್ಯವಿದೆ. ಆದ್ದರಿಂದ

ರಾಜ್ಯ ಸರ್ಕಾರವು ತನ್ನ ಆಯವ್ಯಯದಲ್ಲಿ ಈ ಪ್ರವಾಸಿಕೇಂದ್ರವನ್ನು ಅಭಿವೃದ್ಧಿಪಡಿಸಲು 1993-94 ನೇ ಸಾಲಿನಲ್ಲಿ ಹಣವನ್ನು ಒದಗಿಸಬೇಕು ಹಾಗೂ ಕೇಂದ್ರದಿಂದ ನೆರವು ಪಡೆಯಲು ಕ್ರಮ ಕೈಗೊಳ್ಳಬೇಕೆಂದು ಸನ್ಮಾನ್ಯ ಪ್ರವಾಸೋದ್ಯಮ ಸಚಿವರನ್ನು ವಿನಂತಿಸಿಕೊಳುತ್ತೇನೆ.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಮಾನ್ಯ ಮಾದ್ಯಮ ಮತ್ತು ಸಾರ್ವಜನಿಕ ಕುಂದುಕೊರತೆಗಳ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮೇಲುಕೋಟೆಯು ರಾಮಾನುಜಚಾರ್ಯರಿಂದ ಸ್ಥಾಪಿತವಾದ ವಿಶಿಷ್ಟಾದ್ವೈತ ಸಂಪ್ರದಾಯಕ್ಕೆ ಸೇರಿದ ತೀರ್ಥ ಯಾತ್ರಾಸ್ಥಳವಾಗಿದ್ದು ಶ್ರೀ ಚಲುವರಾಯಸ್ವಾಮಿ ದೇವಸ್ಥಾನದಿಂದ ಪ್ರಸಿದ್ಧ ಕಾರ್ಮಿಕ ಕ್ಷೇತ್ರವಾಗಿದೆ. ಇಲ್ಲಿಗೆ ತೀರ್ಥಯಾತ್ರಿಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಾಮಿಯವರ ವೈರಮುಡಿ ಉತ್ಸವ ಮತ್ತು ರಾಜಮುಡಿ ಉತ್ಸವದ ಸಮಯದಲ್ಲಿ ಬರುತ್ತಾರೆ. ಉಳಿದ ಕಾಲದಲ್ಲಿ ತೀರ್ಥಯಾತ್ರಿಕರ ಸಂಖ್ಯೆ ಕಡಿಮೆ ಇರುತ್ತದೆ. ಇವರುಗಳು ಬಿಡಾರಕ್ಕೆ ಸಾಮಾನ್ಯವಾಗಿ ಸಾಕಷ್ಟು ವ್ಯವಸ್ಥೆ ಇರುತ್ತದೆ. ಮೇಲಾಗಿ, ಈ ಸ್ಥಳವು ಮೈಸೂರಿನಿಂದ ಒಂದು ಗಂಟೆದಾರಿ ಇರುವುದರಿಂದ ತೀರ್ಥ ಯಾತ್ರರ್ಥಿಗಳು ಮೈಸೂರಿನಲ್ಲಿ ತಂಗುವುದಕ್ಕೆ ಇಚ್ಛೆ ಪಡುತ್ತಾರೆ. ಇದು ಧಾರ್ಮಿಕ ಕ್ಷೇತ್ರವಾಗಿರುವುದರಿಂದ ಮತ್ತು ಪುರಾತತ್ವ ಅಭಿರುಚಿಯಿಂದ ಇದನ್ನು ಹಾಗೆಯೇ ಮುಂದುವರಿಸಿ ಅದರ ಪವಿತ್ರತೆಯನ್ನು ಕಾಪಾಡಿಕೊಂಡು ಬರುವುದು ಅತ್ಯವಶ್ಯಕ.

ಧಾರ್ಮಿಕ ಮತ್ತು ದತ್ತಿ ಹಾಗೂ ಪ್ರವಾಸೋದ್ಯಮ ಇಲಾಖೆಗಳು ಜಂಟಿಯಾಗಿ ಯಾತ್ರಾ ಸ್ಥಳಗಳಲ್ಲಿ ಛತ್ರಗಳನ್ನು ನಿರ್ಮಿಸುವ ಬಗ್ಗೆ 1993-94 ರ ಆಯವ್ಯಯದಲ್ಲಿ ಆರ್ಥಿಕ ಅವಕಾಶಗಳನ್ನು ಕಲ್ಪಿಸಲಾಗಿದೆ. ಮೇಲುಕೋಟೆಗೆ ಭೇಟಿ ನೀಡುವ ತೀರ್ಥಯಾತ್ರಿಗಳ ಬಗ್ಗೆ ಸರ್ವೇಕ್ಷಣ ನಡೆಸಿ, ಅವಶ್ಯ ಕಂಡುಬಂದಲ್ಲಿ ಈ ಯೋಜನೆಯನ್ನು ಎರಡು ಇಲಾಖೆಗಳು ಜಂಟಿಯಾಗಿ ಅನುಷ್ಠಾನಗೊಳಿಸಲು ಪರ್ಯಾಲೋಚಿಸಲಾಗುವುದು.

ಹಾಗೂ ಮೇಲುಕೊಟೆಯಲ್ಲಿ ಪ್ರವಾಸಿ ಬಂಗಲೆ ನಿರ್ಮಿಸಲು 29.96 ಲಕ್ಷ ರೂ. ಗಳ ಅಂದಾಜು ಯೋಜನೆಯನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದು, ಕೇಂದ್ರ ಸರ್ಕಾರವು 18.00 ಲಕ್ಷ ರೂ. ಗಳನ್ನು ಮಂಜೂರು ಮಾಡಿ 1.00 ಲಕ್ಷ ರೂ. ಗಳನ್ನು ಮೊದಲನೇ ಕಂತಾಗಿ ಬಿಡುಗಡೆ ಮಾಡಿದೆ. ಪ್ರವಾಸೋದ್ಯಮ ಇಲಾಖೆಯು ಜಮೀನನ್ನು ಪಡೆದುಕೊಂಡಿದೆ.

ಪ್ರತಿ ವರ್ಷ ನಡೆಯುವ ವೈರಮುಡಿ ಉತ್ಸವದ ಸಂದರ್ಭದಲ್ಲಿ ಕೆ.ಎಸ್.ಟಿ.ಡಿ.ಸಿ. ಯು ವಿಶೇಷ ವ್ಯವಸ್ಥಿತ ಪ್ರವಾಸಗಳನ್ನು ಏರ್ಪಡಿಸುತ್ತಿದೆ.

ರಾಜ್ಯ ಪ್ರವಾಸೋದ್ಯಮ ನೀತಿಯಲ್ಲಿ ಮೇಲುಕೋಟೆಯನ್ನು (ಸಿ) ಗುಂಪಿನಡಿಯಲ್ಲಿ ಸೇರಿಸಿದ್ದು, ಇಲ್ಲಿ ಪ್ರವಾಸೋದ್ಯಮ ಯೋಜನೆಗಳನ್ನು ಕೈಗೊಳ್ಳಲು ಮುಂದೆ ಬರುವ ಖಾಸಗಿ ಬಂಡವಾಳ ಹೂಡಿಕೆ ಮೇಲೆ ಶೇಕಡ 25 ಸಬ್ಸಿಡಿ ಹಾಗೂ ಇತರ ರಿಯಾಯಿತಿ ಹಾಗೂ ಉತ್ತೇಜನಗಳನ್ನು ನೀಡಲಾಗುವುದು.

** 7. ಬೆಳಗಾವಿ ಜಿಲ್ಲಾ ಕೇಂದ್ರದಲ್ಲಿರುವ ಕೆ.ಎಸ್.ಆರ್.ಟಿ.ಸಿ. ಮೆಕ್ಯಾನಿಕಲ್ ಡಿವಿಜನ್ ಹಾಗೂ ಬೈಲಹೊಂಗಲ ಡಿಪೋದಲ್ಲಿ ಅವ್ಯವಸ್ಥೆಯ ಬಗ್ಗೆ :

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೆ, ಬೈಲಹೊಂಗಲ ಡಿಪೋದಿಂದ ಕೆ.ಎಸ್.ಆರ್.ಟಿ.ಸಿ. ಯವರು ಬೆಂಗಳೂರು ಬೈಲಹೊಂಗಲ ಸೂಪರ್ ಡಿಲೆಕ್ಸ್ ಬಸ್ಸನ್ನು ಓಡಾಡಿಸುತ್ತಾ ಇರುವರು. ಆದರೆ, ಒಂದು ಬಸ್ಸು (ಸೂಪರ್ ಡಿಲೆಕ್ಸ್) ಕೆಟ್ಟು 15 ದಿನಗಳಾದವು. ಆ ಬಸ್ಸನ್ನು ದುರಸ್ತಿಗಾಗಿ ಬೆಳಗಾಂ ಮೆಕ್ಯಾನಿಕಲ್ ಸಬ್ ಡಿವಿಜನ್, ಕೆ.ಎಸ್.ಆರ್.ಟಿ.ಸಿ. ಬೆಳಗಾಂ ಇವರಿಗೂ ಕಳುಹಿಸಿದರೂ ಇನ್ನೂವರೆವಿಗೂ ಮಾಡಿರುವುದಿಲ್ಲ. ಇದು ಅಲ್ಲದೆ, ಕೂಡಲೇ ದುರಸ್ತಿ ಮಾಡಿಸಲು ವಿನಂತಿಸಿಕೊಂಡಿದ್ದರೂ ಸಹಾ ಯಾವುದೇ ದೂರು ಮಾಡುತ್ತಾ ಇರುವುದಿಲ್ಲ. ಅದು ಅಲ್ಲದೇ ಆ ಗಾಡಿ